**ಪ್ರಾಮುಖ್ಯ**

ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ದೂರವಾಣಿ: 080-22343904/05

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು-560001.

ಸಂಖ್ಯೆ: ಕಾಶಿಇ/ಶೈವಿ/38/ವಿಜ್ಞಾನ ಅನುದಾನ/2017-18

ದಿನಾಂಕ:28.04.2017.

**ಇವರಿಗೆ,**

**ಪದವಿ/ಸ್ನಾತಕೋತ್ತರ ವಿಜ್ಞಾನ ಕೋರ್ಸುಗಳನ್ನು ಹೊಂದಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ;**

ಮಾನ್ಯರೆ,

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಾರಂಭಿಸಲಾಗಿರುವ ಪದವಿ ಮತ್ತು ಸ್ನಾತಕೋತ್ತರ ವಿಜ್ಞಾನ ಕೋರ್ಸುಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಇಡಿ 41 ಹೆಚ್‌ಪಿಸಿ 2016, ದಿನಾಂಕ:13.04.2017.

* * * * * *

ಉಲ್ಲೇಖಿತ ಸರ್ಕಾರದ ಆದೇಶದಲ್ಲಿ 2017-18ನೇ ಸಾಲಿನಲ್ಲಿ ಪದವಿ ವಿಜ್ಞಾನ ಹಾಗೂ ಸ್ನಾತಕೋತ್ತರ ವಿಜ್ಞಾನ ವಿಷಯಗಳನ್ನು ಬೋಧಿಸುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳಾದ ಗ್ರಂಥಾಲಯ ಪುಸ್ತಕ, ಪ್ರಯೋಗಾಲಯ ಉಪಕರಣ, ಪೀಠೋಪಕರಣ ಮತ್ತಿತರ ಸೌಲಭ್ಯಗಳನ್ನು ಒದಗಿಸಲು ಅನುದಾನವನ್ನು ಒದಗಿಸಲಾಗಿರುತ್ತದೆ. ಅದರಂತೆ, ವಿಜ್ಞಾನ ವಿಷಯಗಳನ್ನು ಅಭಿವೃದ್ಧಿಪಡಿಸುವ ಸಂಬಂಧ, ವಿಜ್ಞಾನ ವಿಷಯಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಕೋರ್ಸುಗಳನ್ನು ಹೊಂದಿರುವ ಸರ್ಕಾರಿ ಕಾಲೇಜುಗಳಿಗೆ **ಅವಶ್ಯವಿರುವ ಪ್ರಯೋಗಾಲಯ ಉಪಕರಣಗಳು, ರಾಸಾಯನಿಕ/ ಕನ್ಸೂಮಬಲ್ಸ್, ಪಠ್ಯ-ಪುಸ್ತಕಗಳು/ಪರಾಮರ್ಶನ ಗ್ರಂಥಗಳು ಮತ್ತು ಪೀಠೋಪಕರಣಗಳನ್ನು** ಒದಗಿಸಿಕೊಳ್ಳಲು ಅಗತ್ಯವಿರುವ ಅನುದಾನದ ವಿವರಗಳನ್ನು ಈ ಕೆಳಕಂಡ ನಮೂನೆಯಲ್ಲಿ ಸಿದ್ಧಪಡಿಸಿ, ಶೀಘ್ರವಾಗಿ ಈ ಕಛೇರಿಗೆ ಸಲ್ಲಿಸುವಂತೆ ತಿಳಿಸಲಾಗಿದೆ.

**ನಮೂನೆ**

| ಕ್ರ. ಸಂ. | ಕಾಲೇಜಿನ ಹೆಸರು & ವಿಳಾಸ | ಪದವಿ & ಸ್ನಾತಕೋತ್ತರ ವಿಜ್ಞಾನ ಕೋರ್ಸ್/ ವಿಷಯ ಸಮೂಹ | ಕೋರ್ಸ್ ಪ್ರಾರಂಭವಾದ ವರ್ಷ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ (2017-18) | | | ಅಗತ್ಯವಿರುವ ಅನುದಾನ (ರೂ.ಲಕ್ಷಗಳಲ್ಲಿ) | | | | ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|---|---|---|---|---|---|---|---|
| | | | | I Yr | II Yr | III Yr | ಪ್ರಯೋಗಾಲಯ ಉಪಕರಣಗಳಿಗೆ (ಗಣಕಯಂತ್ರ & ಇದರ ಪೂರಕ ಸಾಮಾಗ್ರಿಗಳನ್ನು ಹೊರತುಪಡಿಸಿ) | ರಾಸಾಯನಿಕ/ ಕನ್ಸುಮಬಲ್ಸ್ ಗಳಿಗೆ | ಪಠ್ಯ-ಪುಸ್ತಕಗಳು/ ಪರಾಮರ್ಶನ ಗ್ರಂಥಗಳಿಗೆ | ಪೀಠೋಪಕರಣ ಗಳಿಗೆ | |
| | | | | | | | | | | | |

ತಮ್ಮ ವಿಶ್ವಾಸಿ,

**ಕಾಲೇಜು ಶಿಕ್ಷಣ ಜಂಟಿ ನಿರ್ದೇಶಕರು**

**ಇವರಿಗೆ:**

1) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ.
2) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು. - **ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.**
3) ಕಛೇರಿ ಪ್ರತಿ.